<u>**ಕಾರ್ಮಿಕ ನ್ಯಾಯಾಲಯ, ಮೈಸೂರು.**</u>

**IID**: 2/2025

ಡಬ್ಲ್ಯೂ.ಡಬ್ಲ್ಯೂ-1

<u>**ದಿನಾಂಕ 04.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು**</u>

**ಪಾಟೀ ಸವಾಲುಃ 2 ನೇ ಪಕ್ಷಗಾರರ ಪರ ಶ್ರೀ.ಪಿ.ಬಿ.ಕೆ. ವಕೀಲರ ಪರ ಶ್ರೀ.ಡಿ.ಕೆ ವಕೀಲರಿಂದಃ**

ನಾನು 2 ನೇ ಪಕ್ಷಗಾರರ ಸಂಸ್ಥೆಯಲ್ಲಿ 2006 ನೇ ಇಸವಿಯಿಂದ ಬದಲಿಯಾಗಿ ಕೆಲಸ ಮಾಡುತ್ತಿದ್ದೇನೆ. ನನ್ನ ಪ್ರಮಾಣ ಪತ್ರದ ಖಂಡಿಕೆ 3 ರಲ್ಲಿ ಪ್ರಕರಣ ಸಂಖ್ಯೆ-Ref.15/2020 ರ ಬಗ್ಗೆ ತಿಳಿಸಿರುತ್ತೇನೆ ಎಂದರೆ ಸರಿ. ಅದರ ಸಂಖ್ಯೆ-Ref.15/2021 ಆಗಿರುತ್ತದೆ ಎಂದರೆ ಸರಿ. ಸದರಿ Ref.15/2021 ರ ಆದೇಶದ ಪ್ರಕಾರ ದಿನಾಂಕಃ 08.02.2025 ರಂದು ಸಂಸ್ಥೆಯವರು ನನ್ನನ್ನು ಪುನಃ ನೇಮಕ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನನ್ನನ್ನು ಪುನಃ ನೇಮಕ ಮಾಡಿಕೊಂಡ ತಕ್ಷಣವೇ ನಾನು ಕೆಲಸಕ್ಕೆ ಸೇರಿಕೊಂಡಿದ್ದೆ ಎಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ ದಿನಾಂಕಃ12.06.2025 ರಂದು 2 ನೇ ಪಕ್ಷಗಾರರು ನನ್ನ ಕೆಲಸ ನಿರಾಕಾರ ಮಾಡಿರುತ್ತಾರೆ ಎಂದು ತಿಳಿಸಿರುತ್ತೇನೆ ಎಂದರೆ ಸರಿ. ದಿನಾಂಕಃ 12.06.2025 ರಲ್ಲಿ ನಾನು ಮೊದಲನೇ ಶಿಫ್ಟ್‌ನಲ್ಲಿ ಕೆಲಸ ಮಾಡಿರುತ್ತೇನೆ.

ದಿನಾಂಕಃ 12.06.2025 ರಲ್ಲಿ 2 ನೇ ಪಕ್ಷಗಾರರ ಸಂಸ್ಥೆಯಲ್ಲಿ ನನಗೆ Termination or dismissal ಆದೇಶ ಕೊಟ್ಟಿಲ್ಲ. ನನ್ನ ಪಂಚ್ ಕಾರ್ಡ್ ಲಾಕ್ ಆಗಿದ್ದ ಬಗ್ಗೆ ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿರುತ್ತೀರ ಎಂದರೆ ಸಾಕ್ಷಿ (ನಿ.ಡಬ್ಲ್ಯೂ-8 ರಂತೆ) ಸಿ.ಡಿ.ಯನ್ನು ಕೊಟ್ಟಿರುತ್ತೇನೆ ಎನ್ನುತ್ತಾರೆ. ನನ್ನ ಪಂಚ್ ಕಾರ್ಡ್ ಲಾಕ್ ಆದಗಾ ನಾನು 2 ನೇ ಪಕ್ಷಗಾರರ ಸಂಸ್ಥೆಗೆ ಒಂದು ಮನವಿಯನ್ನು ಕೊಟ್ಟಿರುತ್ತೇನೆ. ನಾನು ಆ ರೀತಿ ಯಾವುದು ಮನವಿಯನ್ನು 2 ನೇ ಪಕ್ಷಗಾರರ ಸಂಸ್ಥೆಗೆ ಕೊಟ್ಟಿಲ್ಲ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕಃ03.06.2025 ರಂದು ನನಗೆ ದೋಷಾರೋಪಣ ಪಟ್ಟಿಯನ್ನು ಕೊಟ್ಟಿರುತ್ತಾರೆ. ನಾನು ದಿನಾಂಕಃ 09.06.2025 ರಂದು ಅದಕ್ಕೆ ಉತ್ತರವನ್ನು ನೀಡಿರುತ್ತೇನೆ. ನಾನು ಉತ್ತರವನ್ನು ಕೊಟ್ಟ ನಂತರ ದಿನಾಂಕಃ 12.06.2025 ರಿಂದ ಕೆಲಸಕ್ಕೆ ಹಾಜರಾಗಿಲ್ಲ ಎಂದರೆ ಸರಿಯಲ್ಲ. ನಿ.ಡಬ್ಲ್ಯೂ-6 ರ ದಾಖಲೆ ಪ್ರಕಾರ 2 ನೇ ಪಕ್ಷಗಾರರ ಸಂಸ್ಥೆಯವರು ಸಮಾಲೋಚನೆಗೆ ಹಾಜರಾಗಲು ಹಾಗೂ ಕೆಲಸಕ್ಕೆ ಸೇರಿಕೊಳ್ಳಲು ನನ್ನನ್ನು ಕರೆದಿದ್ದರೂ ಎಂದರೆ ಕುಟುಂಬಸಮೇತ ಕರೆದಿದ್ದರು ಎನ್ನುತ್ತಾರೆ. ನಾನು ಸಮಾಲೋಚನೆಗೆ ಹಾಗೂ ಕೆಲಸಕ್ಕೆ ಹೋಗಲು ಎಂದು ಹೋಗಿದ್ದೆ ಆದರೆ ನನಗೆ ಒಳಗೆ ಬಿಟ್ಟಿಲ್ಲ ಎನ್ನುತ್ತಾರೆ. ಸಮಾಲೋಚನೆಗೆ ದಿನಾಂಕಃ 30.06.2025 ರಂದು ಹೋಗಿದ್ದೆ. ನಾನು ಸದರಿ ಪತ್ರಕ್ಕೆ ಉತ್ತರ ನೀಡಿಲ್ಲ. ದಿನಾಂಕಃ 30.06.2025 ರಂದು ನಾನು ಆಡಳಿತ ವರ್ಗದವರಿಗೆ ಪತ್ರ ನೀಡಿ ನನ್ನನ್ನು ಕಲಸಕ್ಕೆ ಸೇರಿಸಿಕೊಳ್ಳಲು ಕೇಳಿಕೊಂಡಿಲ್ಲ. ನಾನು 30.06.2025 ರಂದು ಕೆಲಸಕ್ಕೂ ಬಂದಿಲ್ಲ ಹಾಗೂ ಸಮಾಲೋಚನೇಗೂ ಬಂದಿಲ್ಲ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೆಲಸಕ್ಕೆ ಹಾಜರಾಗದೆ ದಿನಾಂಕಃ 01.07.2025 ರಂದು ಈ ನ್ಯಾಯಾಲಯದ ಮುಂದು ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

2 ನೇ ಪಕ್ಷಗಾರರು ನನಗೆ ಪದೇ ಪದೇ ಕೆಲಸಕ್ಕೆ ಹಾಜರಾಗಲು ಹಾಗೂ ಸಮಾಲೋಚನೆಗೆ ಹಾಜರಾಗಲು ನನಗೆ ತಿಳಿಸಿದ್ದರೂ ಕೂಡ ನಾನು ಉದ್ದೇಶಪೂರ್ವಕವಾಗಿ ಹಾಜರಾಗಿಲ್ಲ ಎಂದರೆ ಸರಿಯಲ್ಲ. ನನ್ನ ಪಂಚ್ ಕಾರ್ಡ್ ಲಕ್ ಆಗಿದೆ ಎಂದು ಕಲ್ಪನೆ ಮಾಡಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪಕ್ಷಗಾರರ ಸಂಸ್ಥೆಯವರು ನನಗೆ ಯಾವತ್ತು ಕೆಲಸಕ್ಕೆ ನಿರಾಕರಿಸಿಲ್ಲ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಡಬ್ಲ್ಯೂ-11 ರಿಂದ 13 ದಾಖಲೆಗಳನ್ನು ನನ್ನ ಕೈಗೆ ಕೊಟ್ಟಿರುತ್ತಾರೆ.

ನಾನು ಕೆಲಸ ಮುಗಿಸಿಕೊಂಡು ಬರುವಾಗ ಸದರಿ ದಾಖಲೆಗಳನ್ನು ನನಗೆ ಕೊಟ್ಟಿರುತ್ತಾರೆ. ನಾನು ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳವನ್ನು ವೇತನವನ್ನು ಪಡೆದಿರುತ್ತೇನೆ ಎಂದರೆ ಸರಿ.

**ಈ ಹಂತದಲ್ಲಿ ಶ್ರೀ.ಪಿ.ಬಿ.ಕೆ. ವಕೀಲರ ಪರ ಶ್ರೀ.ಡಿ.ಕೆ ವಕೀಲರು ಸಾಕ್ಷಿಯ ಮುಂದಿನ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**